## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ:** | 680 (794) |
| **ಮಾನ್ಯ ಸದಸ್ಯರ ಹೆಸರು:** | ಶ್ರೀ ಡಿ. ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ ) |
| **ಉತ್ತರಿಸಬೇಕಾದ ದಿನಾಕ:** | 18.08.2025 |
| **ಉತ್ತರಿಸುವ ಸಚಿವರು:** | ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ | ಆಹಾರ ಸುರಕ್ಷತಾ ಪ್ರಾಧಿಕಾರವು ಅಸ್ತಿತ್ವಕ್ಕೆ ಬಂದು ಎಷ್ಟು ವರ್ಷಗಳಾಗಿರುತ್ತದೆ; ಈ ಪ್ರಾಧಿಕಾರ ರಚನೆಯಾಗಲು ಹಾಗೂ ಯಾವ ಉದ್ದೇಶದಿಂದ ಪ್ರಾರಂಭಗೊಂಡಿರುತ್ತದೆ; | ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಕಾಯ್ದೆಯನ್ನು 2006 ರಲ್ಲಿ ಜಾರಿಗೆ ತರಲಾಗಿದೆ. ಈ ಕಾಯ್ದೆಗೆ ಅನುಗುಣವಾಗಿ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ನಿಯಮಗಳು, 2011 ನ್ನು ದಿನಾಂಕ:05.08.2011 ರಂದು ಜಾರಿಗೆ ತರಲಾಗಿದೆ. ಆಹಾರ ತಯಾರಿಕೆ, ಸಂಗ್ರಹ, ವಿತರಣೆ, ಸಗಟು ಚಿಲ್ಲರೆ ಮಾರಾಟ ಹಾಗೂ ಆಮದು ಈ ವಿವಿಧ ಹಂತಗಳಲ್ಲಿ ಉತ್ತಮ ಗುಣಮಟ್ಟದ ಆಹಾರ ದೊರೆಯುವಂತೆ ಮಾಡುವ ಉದ್ದೇಶದಿಂದ ಪ್ರಾರಂಭಗೊಂಡಿರುತ್ತದೆ. |
| ಆ | ಪ್ರಸ್ತುತ ಈ ಪ್ರಾಧಿಕಾರದಲ್ಲಿ ಎಷ್ಟು ಅಧಿಕಾರಿಗಳು ಮತ್ತು ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ; ಇದರಲ್ಲಿ ಖಾಯಂ ನೌಕರರ ಸಂಖ್ಯೆ ಎಷ್ಟು; ಹಾಗೂ ಗುತ್ತಿಗೆ ಆಧಾರದ ಮೇಲೆ ಕೆಲಸ ಮಾಡುತ್ತಿರುವವರ ವಿವರಗಳನ್ನು ಒದಗಿಸುವುದು; | ಆಹಾರ ಸುರಕ್ಷತಾ ವಿಭಾಗದಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳ ಮಾಹಿತಿ **ಅನುಬಂಧದಲ್ಲಿ** ನೀಡಲಾಗಿದೆ. ಪ್ರಸ್ತುತ ಗುತ್ತಿಗೆ ಆಧಾರದ ಮೇಲೆ ಯಾರೂ ಕಾರ್ಯ ನಿರ್ವಹಿಸುತ್ತಿರುವುದಿಲ್ಲ. |
| ಇ | ರಾಜ್ಯದಲ್ಲಿ ಆಹಾರ ಸುರಕ್ಷತಾ ಪ್ರಾಧಿಕಾರ ಎಷ್ಟು ಜಿಲ್ಲೆಗಳಲ್ಲಿ ಕಾರ್ಯನಿರ್ವಹಿಸುತ್ತಿದೆ; | ರಾಜ್ಯಾಂದ್ಯಂತ 30 ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ-5 ಅಂಕಿತಾಧಿಕಾರಿಗಳ ಕಛೇರಿ, ಹುಬ್ಬಳ್ಳಿ-ಧಾರವಾಡ ಮತ್ತು ಮೈಸೂರು |

| | | |
|---|---|---|
| | ಹಾಗೂ ಕೇಂದ್ರ ಕಛೇರಿ ಎಲ್ಲಿದೆ; | ಮಹಾನಗರ ಪಾಲಿಕೆಗಳಲ್ಲಿ ತಲಾ 2 ರಂತೆ ಅಂಕಿತಾಧಿಕಾರಿಗಳ ಕಛೇರಿಗಳು ಕಾರ್ಯನಿರ್ವಹಿಸುತ್ತಿದೆ.<br><br>ರಾಜ್ಯದ ಕೇಂದ್ರ ಕಛೇರಿ ಈ ಕೆಳಕಂಡ ವಿಳಾಸಲ್ಲಿದೆ:<br><br>ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ, ಸಾರ್ವಜನಿಕಆರೋಗ್ಯ ಸಂಸ್ಥೆ ಆವರಣ, ಶೇಷಾದ್ರಿ ರಸ್ತೆ, ಬೆಂಗಳೂರು-01. |
| ಈ | ಪ್ರಾಧಿಕಾರ ಪ್ರಾರಂಭಗೊಂಡ ದಿನದಿಂದಲೂ ಇಲ್ಲಿಯವರೆಗೂ ಒಬ್ಬ ಸಿಬ್ಬಂದಿಯನ್ನು ನೇಮಕ ಮಾಡಿಲ್ಲ ಎಂಬುದು ನಿಜವೇ; ಹಾಗಿದ್ದಲ್ಲಿ ಎಷ್ಟು ವರ್ಷಗಳಿಂದ ಎರವಲು ಸೇವೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ? (ಮಾಹಿತಿ ನೀಡುವುದು) | ಪ್ರಾಧಿಕಾರ ಪ್ರಾರಂಭಗೊಂಡ ದಿನದಿಂದಲೂ ಇಲ್ಲಿಯ ವರೆವಿಗೂ ನೇರ ನೇಮಕಾತಿಯಿಂದ ಯಾವುದೇ ಸಿಬ್ಬಂದಿಯನ್ನು ನೇಮಕ ಮಾಡಿರುವುದಿಲ್ಲ. 200 ಹುದ್ದೆಗಳಿಗೆ ನೇಮಕಾತಿ ಪ್ರಕ್ರಿಯೆಗಾಗಿ ಪ್ರಸ್ತಾವನೆ ಸಲ್ಲಿಸಲಾಗಿದ್ದು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ: ಸಿಆಸುಇ 388 ಸೇನೆನಿ 2024, ದಿನಾಂಕ: 25.11.2024 ರಲ್ಲಿ ರಾಜ್ಯ ಸಿವಿಲ್ ಸೇವೆಗಳಲ್ಲಿನ ಹುದ್ದೆಗಳ ನೇಮಕಾತಿಗಾಗಿ ಹೊಸದಾಗಿ ಅಧಿಸೂಚನೆ ಹೊರಡಿಸುವುದನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ತಡೆಹಿಡಿಯಲಾಗಿರುತ್ತದೆ. ಅನ್ನು ಪಾಲಿಸಬೇಕಾಗಿರುವುದರಿಂದ ಸಿಆಸು ಇಲಾಖೆಯಿಂದ ಪರಿಷ್ಕೃತ ಆದೇಶ ಹೊರಡಿಸಿದ ನಂತರ ಹುದ್ದೆಗಳ ಭರ್ತಿ ಪ್ರಸ್ತಾವನೆಯನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.<br><br>ಎಲ್ಲಾ ಅಧಿಕಾರಿ ಮತ್ತು ಸಿಬ್ಬಂದಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ನಿಯೋಜನೆ ಮೇರೆಗೆ ನೇಮಕಗೊಂಡಿದ್ದು, ಕೆಸಿಎಸ್ಆರ್ ನಿಯಮದ ಪ್ರಕಾರ ಕರ್ತವ್ಯ ನಿರ್ವಹಿಸಲಾಗುತ್ತಿದೆ. |

**ಆಕುಕ 88 ಎಸ್‌ಬಿವಿ 2025**

**(ದಿನೇಶ್ ಗುಂಡೂರಾವ್)**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು**

| ಅನುಬಂಧ | | | | | |
|---|---|---|---|---|---|
| **FOOD SAFETY AND DRUG ADMINISTRATION** | | | | | |
| **Food Safety and Standard Authority, Sanctioned, working and Vacant Details** | | | | | |
| **SL No** | **Group** | **Designation** | **Sanctioned** | **Working** | **Vacant** |
| 1 | A | Commissioner | 1 | 1 | 0 |
| 2 | A | Joint Commissioner / Deputy Commissioner | 1 | 0 | 1 |
| 3 | A | Deputy Commissioner (Admin) | 1 | 0 | 1 |
| 4 | A | Deputy Commissioner (Squad) | 1 | 0 | 1 |
| 5 | A | Chief Food Analyst | 4 | 0 | 4 |
| 6 | A | Senior Food Analyst | 4 | 2 | 2 |
| 7 | A | Food Analyst | 14 | 10 | 4 |
| 8 | A | Designated Officer | 37 | 26 | 11 |
| 9 | A | Legal Advisor | 1 | 0 | 1 |
| 10 | A | District Judge | 1 | 0 | 1 |
| 11 | A | Registrar Class | 1 | 0 | 1 |
| 12 | A | Assistant Public Prosecutor | 1 | 0 | 1 |
| 13 | B | Junior Food Analyst | 25 | 6 | 19 |
| 14 | B | Junior Microbiologist | 1 | 0 | 1 |
| 15 | B | Senior Food Safety Officer | 34 | 0 | 34 |
| 16 | B | Assistant Administrative Officer | 1 | 0 | 1 |
| 17 | C | Food Safety Officer | 210 | 73 | 137 |
| 18 | C | Statistical Officer | 1 | 1 | 0 |
| 19 | C | Office Superintendent | 1 | 1 | 0 |
| 20 | C | Stenographer | 1 | 0 | 1 |
| 21 | C | First Division Assistant | 41 | 10 | 31 |
| 22 | C | Second Division Assistant | 1 | 1 | 0 |
| 23 | D | Group D | 8 | 1 | 7 |
| | | **Total** | 391 | 132 | 259 |

ಉಪ ಆಯುಕ್ತರು (ಆಡಳಿತ),
ಆಹಾರ ಸುರಕ್ಷತೆ ಮತ್ತು ಔಷಧ ಆಡಳಿತ,
ಬೆಂಗಳೂರು.